ಅನುಬಂಧ-ಈ

2002-2003ನೇ ಸಾಲಿನಲ್ಲಿ ಖರೀದಿಸಿದ(2000-2001ರವಾರ್ಷಿಕ ಬೇಡಿಕೆ)ವಿವಿಧ ರೂಗಳ ವಿವರ

ಕ್ರ.ಸಂ	ಶೂಗಳಹೆಸರು	ಸರಬರಾಜು ಮಾಡಿದ ಸಂಸ್ಥೆಯ ಹೆಸರು	ಖರೀದಿಸಿದ ಪ್ರಮಾಣ	ಖರೀದಿಸಲು ತಗುಲಿದ ವೆಚ್ಚ ರೂ.ಗಳಲ್ಲಿ
1.	ಕ್ಯಾನ್‌ವಾಸ್‌ಶೂ (ಪಿ.ಟಿ.ಶೂಗಳು)	ಮೆ: ಪ್ರಿಷ್ಟನ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಬೆಂಗಳೂರು	21,450 ಜೊತೆ	16,09,936-00
2.	ಡಿ.ಎಂ.ಎಸ್. ಕಪ್ಪು ಬಣ್ಣದ ಆ್ಯಂಕರ್‌ಶೂಗಳು	ಮೆ:ಭಾರತ್‌ಶೂ ಮತ್ತು ಕಂಪನಿ ಬೆಂಗಳೂರು	24.844 ಜೊತೆ	52,92,987-00
3.	ಡಿ.ಎಂ.ಎಸ್. ಕಪ್ಪು ಬಣ್ಣದ ಅಮುನಿಷನ್ ಶೂ	ಮೆ:ಲಿಡ್ಕರ್‌ಬೆಂಗಳೂರು	19,855ಜೊತೆ	50,31,604-00
			ಒಟ್ಟು	**1,19,34,517-00**

ಹುಲ್‌ಸೂರ್ ಕ್ಷೇತ್ರದ ಹಳ್ಳಿಬೀಡ್(ಬಿ) ಗ್ರಾಮಪಂಚಾಯ್ತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೆರಿಸುವುದು

170(338) ಶ್ರೀ ರಾಜೇಂದ್ರ ವರ್ಮ (ಹುಲಸೂರು) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಹಳ್ಳಿಬೇಡ್(ಬಿ) ಗ್ರಾಮ ಪಂಚಾಯ್ತಿಯು ಇಡೀ ರಾಜ್ಯದಲ್ಲಿ ಅತಿ ದೊಡ್ಡ ಗ್ರಾಮ ಪಂಚಾಯ್ತಿಯಾಗಿದ್ದು (41 ಸದಸ್ಯರಿದ್ದು ಸುಮಾರು 12 ಸಾವಿರ ಮತದಾರರಿರುತ್ತಾರೆ) ಇದನ್ನು ಪುರಸಬೆಯನ್ನಾಗಿ ಮೇಲ್ದರ್ಜೆಗೆ ಏರಿ ಸುವ ವಿಚಾರವು ಯಾವ ಹಂತದಲ್ಲಿದೆ?

ಆ. ಈ ವಿಷಯದಲ್ಲಿ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ವರದಿಯನ್ನು ಯಾವಾಗ ಕಳುಹಿಸಿದ್ದಾರೆ?

ಇ. ಸುಪ್ರಿಂಕೋರ್ಟ್ ಇತ್ತೀಚಿನ ತನ್ನ ತೀರ್ಪಿನಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಗ್ರಾಮ ಪಂಚಾಯ್ತಿಗಳನ್ನು ಪುರಸಭೆಗಳನ್ನಾಗಿ ಮೇಲ್ದರ್ಜೆಗೆ ಏರಿಸಲು ನೀಡಿರುವ ತೀರ್ಪನ್ನು ಸರ್ಕಾರ ಗಮನಿಸಿದೆಯೇ?

ಈ. ಹಾಗಿದ್ದಲ್ಲಿ ಮೇಲ್ಕಂಡ ಮಾನದಂಡದ ಮೇಲೆ ಹಳ್ಳಿಬೇಡ್ (ಬಿ) ಗ್ರಾಮ ಪಂಚಾಯ್ತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೆ ಏರಿಲಾಗುವುದೇ? ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು)

ಅ. ಹಳ್ಳಿಖೇಡ್(ಬಿ) ಗ್ರಾಮ ಪಂಚಾಯ್ತಿಯನ್ನು ಪಟ್ಟಣ ಪಂಚಾಯತಿಯನ್ನಾಗಿ ಮೇಲ್ದರ್ಜೆಗೆ ಏರಿಸುವ ವಿಚಾರ ಪರಿಶೀಲನೆಯ ಹಂತದಲ್ಲಿದೆ.

ಆ. ದಿನಾಂಗ 6-1-2003 ರಂದು ಕಳುಹಿಸಿರುತ್ತಾರೆ.

ಇ. ಇಲ್ಲ

ಈ. ಕೇಂದ್ರ ಸರ್ಕಾರವು ರಾಜ್ಯದ ಪಾರ್ಲಿಮೆಂಟ್ ಹಾಗೂ ವಿಧಾನ ಸಭೆ ಕ್ಷೇತ್ರಗಳ ವ್ಯಾಪ್ತಿಯ ಪರಿಮಿತಿಯನ್ನು ನಿಗಧಿಗೊಳಿಸುವ ಕಾರ್ಯ ಪ್ರಗತಿಯಲ್ಲಿರುವುದರಿಂದ ಸದರಿ ಕಾರ್ಯ ಮುಗಿದ ನಂತರ ಸೂಕ್ತ ಕ್ರಮ ತೆಗೆದು ಕೊಳ್ಳಲಾಗುವುದು.

ರಾಜ್ಯದಲ್ಲಿ ಆನ್‌ಲೈನ್ ಲಾಟರಿ ಕುರಿತು

171 (344) ಶ್ರೀ ರಾಜೇಂದ್ರ ವರ್ಮ (ಹುಲ್‌ಸೂರು):ಮಾನ್ಯ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯ ಸರ್ಕಾರವು ಆನ್‌ಲೈನ್ ಲಾಟರಿಯನ್ನು ಯಾವಾಗ ಪ್ರಾರಂಭಿಸಿತ್ತು ಕಳೆದ 3 ವರ್ಷಗಳಿಂದ ಇಲ್ಲಿಯವರೆವಿಗೆ ಸರ್ಕಾರಕ್ಕೆ ಬಂದಿರುವ ಆದಾಯವೆಷ್ಟು: ಎಷ್ಟು ಜನರಿಗೆ ಇದರಿಂದ ಬಹುಮಾನಗಳು ಬಂದಿದೆ (ಪೂರ್ಣ ವಿವರಗಳನ್ನು ಒದಗಿಸುವುದು) ಪ್ರಸ್ತುತ ಸಾಲಿನಲ್ಲಿ ಸರ್ಕಾರವು ಇದರಿಂದ ನಿರೀಕ್ಷಿಸಿರುವ ಆದಾಯದ ಮೊತ್ತವೆಷ್ಟು?

ಆ. ಸರ್ಕಾರವು ಈ ಲಾಟರಿಯನ್ನು ಪ್ರಾರಂಭಿಸುವ ಮುನ್ನ ಇದರ ಸಾಧಕ ಭಾದಕಗಳನ್ನು ಅಭ್ಯಸಿಸಿದೆಯೇ:

ಇ. ಈ ಲಾಟರಿಯ ಚಟಕ್ಕೆ ಬಿದ್ದು ಹಲವಾರು ಜನರು ನಿರ್ಗತಿಕರಾಗುತ್ತಿರುವುದು ಹಾಗೂ ಇತ್ತೀಚೆಗೆ ಒಬ್ಬ ವ್ಯಕ್ತಿಯ ಆತ್ಮಹತ್ಯೆ ಮಾಡಿಕೊಂಡಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ:

ಈ. ಹಾಗಿದ್ದಲ್ಲಿ, ಸಮಾಜದ ಜನರನ್ನು ನಿರ್ಗತಿಕರನ್ನಾಗಿ ಮಾಡುತ್ತಿರುವ ಹಾಗೂ ಗುರಿಯಾಗಿರುವ ಈ ಆನ್‌ಲೈನ್ ಲಾಟರಿಯನ್ನು ಈ ಆನ್‌ಲೈನ್ ಲಾಟರಿಯನ್ನು ಸರ್ಕಾರ ಈ ಕೂಡಲೇ ರದ್ದುಪಡಿಸುವುದೇ ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಬಾಬುರಾವ್ ಬಸವಣಪ್ಪ ಚಿಂಚನೂರು (ಸಣ್ಣ ಉಳಿತಾಯ ಮತ್ತು ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು)

ಅ. ರಾಜ್ಯ ಸರ್ಕಾರವು ಆನ್‌ಲೈನ್ ಲಾಟರಿ ಲಕ್ಕಿ-3ನ್ನು ದಿನಾಂಕ: 14-8-2002ರಂದು ಪ್ರಾರಂಭಿಸಿದೆ. ಈ ದಿನಾಂಕದಿಂದ 22-2-2003ರವರೆವಿಗೆ ಸರ್ಕಾರಕ್ಕೆ ಬಂದ ನಿವ್ವಳ ಆದಾಯ ರೂ 42.96.75.925/ ರಷ್ಟಾಗಿದೆ ಇವರೆಗೂ 6.06.571 ಜನರು ಬಹುಮಾನಗಳನ್ನು (24.2.2003ರಂತೆ ಗೆದ್ದಿರುತ್ತಾರೆ. ಮೊದಲ ವರ್ಷದಲ್ಲಿ ಸುಮಾರು ರೂ.100 ಕೋಟಿ ನಿವ್ವಳ ಆದಾಯ ಬರಲಿದೆ.

ಆ. ಹೌದು